


ನಕ್ಕುಬಿಡಿ



**ಆಟದ ಮೈದಾನ**

ಡಾಕ್ಟರ್: ದಿನಾ ವ್ಯಾಯಾಮ ಮಾಡಿ, ವಾಕ್ ಮಾಡಿ, ಆಟ ಆಡಿ ನಿಮ್ಮ ಆರೋಗ್ಯ ಸುಧಾರಿಸುತ್ತದೆ.

ಗುಂಡ: ದಿನಾ ನಾನು ಫುಟ್ಬಾಲ್, ಕ್ರಿಕೆಟ್, ಟೆನಿಸ್ ಆಡ್ತೀನಲ್ಲಾ?

ಡಾಕ್ಟರ್: ಗುಡ್. ಎಲ್ಲಿ ಆಡ್ತೀರಾ?

ಗುಂಡ: ನನ್ನ ಮೊಬೈಲ್‌ನಲ್ಲಿ

★★★

**ಚಳವಳಿ**

ಯಂಕ: ನೀನು 'ನೆಕ್ಸ್ಟ್ ಮಂತ್' ವರದಕ್ಷಿಣೆ ವಿರುದ್ಧ ಚಳವಳಿ ಮಾಡ್ತೀನಿ ಅಂದ್ಯಲ್ಲಾ, ಈ ತಿಂಗ್ಳೇ ಯಾಕೆ ಮಾಡ್ಬಾರ್ದು?

ಗುಂಡ: ಯಾಕಂದ್ರೆ..... ಈ ತಂಗ್ಳು ನನ್ನ ಮದ್ವೆ, ಮುಂದಿನ ತಿಂಗ್ಳು ನನ್ನ ತಂಗಿ ಮದ್ವೆ.

★★★

**ಇಷ್ಟವಾದ ಸಬ್ಜೆಕ್ಟ್**

ಅಮ್ಮ: ಮಗೂ ನಿನ್ಗೆ ಇಷ್ಟವಾದ ಸಬ್ಜೆಕ್ಟ್ ಯಾವುದು?

ಮಗ: ಎಕನಾಮಿಕ್ಸ್ (ಅರ್ಥಶಾಸ್ತ್ರ)

ಅಮ್ಮ: ಓ.. ವೆರಿಗುಡ್ ಯಾಕಪ್ಪಾ?

ಮಗ: ಎಕಾನಾಮಿಕ್ಸ್ ಟೀಚರ್ ಯಾವಾಗಲೂ ರಜೆಯಲ್ಲೇ ಇರುತ್ತಾರೆ.

★★★




ಗುಂಡ: ನರ್ಸ್, ನಾನು ನಿಮ್ಮನ್ನು ಪ್ರೀತಿಸುತ್ತೇನೆ

ನರ್ಸ್: ಅದನ್ನೇ ಇಂಗ್ಲಿಷ್‌ನಲ್ಲಿ ಹೇಳಿ

ಗುಂಡ: 'ಐ ಲವ್ ಯು ಸಿಸ್ಟರ್'

ನರ್ಸ್: ಥ್ಯಾಂಕ್ಯೂ, ಐ ಲವ್ ಯು ಬ್ರದರ್

ಸಂಗ್ರಹ: ಸುಮಾ ಕಳಸಾಪುರ